


ಗಂಟೆ. ಆದರೆ ಪಾರ್ಕಿಂಗ್ ಲಾಟ್‌ನಲ್ಲಿ ಕಾರು ನಿಲ್ಲುವುದು ಬರೋಬ್ಬರಿ 8 ತಾಸು.

ಅಷ್ಟೂ ಹೊತ್ತು ಕಾರು ಕೆಲಸವಿಲ್ಲದೆ ನಿಂತು, ಪಾರ್ಕಿಂಗ್ ಜಾಗವನ್ನು ಆಕ್ರಮಿಸುವುದು ಎಷ್ಟು ಸರಿ. ಅದೇ ಅಧಿಕಾರಿಯನ್ನು ಮನೆಯ ಹತ್ತಿರವೇ ಇರುವ ಚಾಲಕ ರಹಿತ ಆಟೊಮ್ಯಾಟಿಕ್ ಕಾರು ಬೆಳಗ್ಗೆ 8ಕ್ಕೆ ಪಿಕ್ ಮಾಡಿ, ಸಂಜೆ ಹಿಂತಿರುಗಿ ಬರುವಾಗ ಇನ್ನೊಂದು ಕಾರು ಮನೆ ತಲುಪಿಸಿದರೆ ಆಯಿತಲ್ಲವೆ? ಒಂದು ಗಂಟೆಯ ಪ್ರಯಾಣಕ್ಕೆ ಬೇಕಾದ ಸೌಲಭ್ಯವನ್ನು ಕಾರ್ ಪೂಲಿಂಗ್ ವ್ಯವಸ್ಥೆಯಿಂದ ಪಡೆಯಬಹುದಲ್ಲವೆ?

ಅಲ್ಗೊರಿದಂ ಆಧರಿಸಿ ನಡೆಯುವ ಆಟೊನಾಮಸ್ ಕಾರುಗಳು ಈಗ ರಸ್ತೆಯ ಮೇಲಿರುವ ಶೇ. 90ರಷ್ಟು ಕಾರುಗಳನ್ನು ರಿಪ್ಲೇಸ್ ಮಾಡಬಲ್ಲವು. ಹಾಗೆಯೇ ವ್ಯಕ್ತಿ ಎಲ್ಲಿದ್ದಾನೆ ಮತ್ತು ಎಲ್ಲಿಗೆ ಪ್ರಯಾಣಿಸುತ್ತಾನೆ ಎಂಬುದು ಅಲ್ಗೊರಿದಂಗೆ ಗೊತ್ತಾಗುವುದರಿಂದ ಕೆಲಸ, ಪ್ರಯಾಣ ಎರಡೂ ಸರಿಯಾಗಿ ನಡೆಯುತ್ತವೆ.

ಯಾವುದಾಗಿರಬೇಕು — ಹೀಗೆ, ನಮ್ಮ ಬದುಕಿಗೆ ಸಂಬಂಧಿಸಿದ ಹಲವು ಸಂಗತಿಗಳನ್ನು ಇದುವರೆಗೆ ನಾವೇ ನಿರ್ಧರಿಸುತ್ತಿದ್ದೆವು; ಕೆಲವೊಮ್ಮೆ ಇತರರ ಸಲಹೆ ಪಡೆದು ನಿರ್ಧರಿಸುತ್ತಿದ್ದೆವು. ಈಗ ಪರಿಸ್ಥಿತಿ ಬದಲಾಗುತ್ತಿದೆ. ನಮ್ಮ ನಿರ್ಧಾರಗಳನ್ನು, ಅತ್ಯಂತ ಕಡಿಮೆ ಹಾಗೂ ಸೂಕ್ತ ಸಮಯದಲ್ಲಿ ನಮ್ಮದೇ ದತ್ತಾಂಶ ಆಧರಿಸಿದ 'ಅಲ್ಗೊರಿದಂ' ಮಾಡಿ ಮುಗಿಸುತ್ತದೆ. ನಮ್ಮನ್ನು ನಮಗಿಂತ ಚೆನ್ನಾಗಿ ಅರ್ಥಮಾಡಿಕೊಳ್ಳುವ ಅಲ್ಗೊರಿದಂ, ಮಾಡುವ ಕೆಲಸದಲ್ಲಿ ಪೂರ್ಣ ಕ್ಷಮತೆ ಹೊಂದಿರುತ್ತದೆ ಮತ್ತು ನಮಗೆ ಸರಿಯಾಗಿ ಹೊಂದುವ ನಿರ್ಣಯಗಳನ್ನೇ ತೆಗೆದುಕೊಳ್ಳುತ್ತದೆ. ಪಾಲಿಸುವುದು, ಬಿಡುವುದು ನಮಗೆ ಬಿಟ್ಟದ್ದು.

ಅಲ್ಗೊರಿದಂ ಎಂಬುದು ನಿನ್ನೆಮೊನ್ನೆ ಅಸ್ತಿತ್ವಕ್ಕೆ ಬಂದಿದ್ದೇನಲ್ಲ! ನಾವೀಗ ಬಳಸುತ್ತಿರುವ ಅಲ್ಗೊರಿದಂಗಳು ಕ್ರಿಸ್ತಪೂರ್ವದಲ್ಲೇ ಇದ್ದವು. ಸಂಸ್ಕೃತ ಛಂದಸ್ಸನ್ನು ರಚಿಸಿದ ಆಚಾರ್ಯ ಪಿಂಗಳ ತನ್ನ 'ಛಂದಸ್ಸೂತ್ರ'ದಲ್ಲಿ ಅಲ್ಗೊರಿದಂ ಅಥವಾ ಕ್ರಮಾವಳಿಗಳ ಬಗ್ಗೆ ವಿಸ್ತೃತವಾಗಿ ಚರ್ಚಿಸಿದ್ದ. ಯೂಕ್ಲಿಡ್ ತನ್ನ ಪುಸ್ತಕ 'ಎಲಿಮೆಂಟ್ಸ್'ನಲ್ಲಿ ಎರಡು ಸಂಖ್ಯೆಗಳನ್ನು ಭಾಗಿಸಬಲ್ಲ ಅತಿದೊಡ್ಡ ಹಾಗೂ ಸಾಮಾನ್ಯ ಭಾಜಕ ಮತ್ತು ಫ್ಯಾಕ್ಟೋರಿಯಲ್ (ಕ್ರಮಗುಣಿತ)ದ ಕುರಿತು ಬರೆದ ಉದಾಹರಣೆಗಳು ಅಲ್ಗೊರಿದಂನ ಮೂಲಗಳೆನಿಸಿವೆ. ಪಿಂಗಳನ ಜೊತೆಗೆ ನ್ಯೂಟನ್ ಹಾಗೂ ಗಾಸ್ ನೀಡಿದ ಕೆಲವು ಗಣಿತೀಯ ಕ್ರಮಾವಳಿಗಳು ಇಂದಿನ ಯುಗದ ಅಲ್ಗೊರಿದಂನ ತಳಹದಿಯಾಗಿವೆ. ಆಗ ಬಳಸುತ್ತಿದ್ದ ಕೋಡಿಂಗ್ ಭಿನ್ನವಾಗಿತ್ತೆನ್ನುವುದನ್ನು ಹೊರತುಪಡಿಸಿದರೆ, ಅಲ್ಗೊರಿದಂನ ಮೂಲಸ್ವರೂಪ ಮಾತ್ರ ಹಾಗೆಯೇ ಇದೆ.

ಜನಸಂಖ್ಯೆ ಕಡಿಮೆ ಇದ್ದಾಗ ಜನರ ಒಳೆಯ ಕೆಟ್ಟ ಕೆಲಸಗಳು ಬೇಗನೆ ಗೊತ್ತಾಗಿ ಪ್ರಶಂಸೆ–ಶಿಕ್ಷೆಗಳು ಅಂದಂದೇ ದೊರೆಯುತ್ತಿದ್ದವು. ಜನಸಂಖ್ಯೆ ಬೆಳೆದು ಊರು ನಗರಗಳು ವಿಶಾಲವಾಗಿ, ಜನ ವಲಸೆ ಹೋಗಿ ವಿಶ್ವದ ವಿವಿಧ ಭಾಗಗಳಲ್ಲಿ ನೆಲೆಸತೊಡಗಿದಾಗ ಅಸ್ತಿತ್ವದಲ್ಲಿದ್ದ ಧಾರ್ಮಿಕ ಕಟ್ಟಳೆಗಳ ಶಕ್ತಿ ಕಡಿಮೆಯಾಗಿ ಕಾನೂನು ವ್ಯವಸ್ಥೆಗಳು ಜಾರಿಗೆ ಬಂದು ಜನರ ಬಗೆಗಿನ ಮಾಹಿತಿ ಸಂಗ್ರಹಣೆ ಶುರುವಾಯಿತು. ಕಳ್ಳತನ, ಕೊಲೆ, ಅತ್ಯಾಚಾರ, ದೊಂಬಿ, ಲೂಟಿ ಪ್ರಕರಣಗಳು, ವರ್ಣದ್ವೇಷಗಳು ಅಧಿಕವಾದಂತೆ ಪ್ರಕರಣ ತಡೆಯಲು ತಂತ್ರಜ್ಞಾನದ ಅವಲಂಬನೆ ಅನಿವಾರ್ಯವಾಯಿತು. ದೇವರು ಧರ್ಮಗಳಿಗೆ ಹೆದರದ ಜನರನ್ನು ತಂತ್ರಜ್ಞಾನ ಬಳಸಿ ಹತ್ತಿಕ್ಕುವ ಕೆಲಸ ಶುರುವಾಯಿತು. ಈಗ ಅದನ್ನು ಸರಿಯಾಗಿ ಮಾಡಲು ನಮ್ಮದೇ ಮಾಹಿತಿ ಆಧರಿಸಿ ನಮ್ಮನ್ನು ನಿಯಂತ್ರಿಸುವ ಕೆಲಸವನ್ನು ಅಲ್ಗೊರಿದಂಗಳಿಗೆ ಒಪ್ಪಿಸಲಾಗಿದೆ.

## ಎಲ್ಲೆಲ್ಲಿ ಅಲ್ಗೊರಿದಂ?

ನಾವೆಲ್ಲ ಬಳಸುತ್ತಿರುವ ವೆಬ್‌ಸೈಟ್, ಇಮೇಲ್, ಟ್ವಿಟ್ಟರ್, ಫೇಸ್‌ಬುಕ್, ಇನ್‌ಸ್ಟಾಗ್ರಾಂ, ನೆಟ್ ಬ್ಯಾಂಕಿಂಗ್, ಇಂಟರ್‌ನೆಟ್, 3ಡಿ ಪ್ರಿಂಟಿಂಗ್, ಫೋರ್‌ಜಿ, ಫೈವ್‌ಜಿ ನೆಟ್‌ವರ್ಕ್, ಅಪ್‌ಲೋಡ್, ಡೌನ್‌ಲೋಡ್, ಫೈಲ್ ಟ್ರಾನ್ಸ್‌ಫರ್, ಕ್ರಿಯೇಟ್, ಆಡ್, ಡಿಲೀಟ್, ಆನ್, ಆಫ್ ಮತ್ತು ಮೊಬೈಲ್‌ಗಳ ತುಂಬೆಲ್ಲ ತುಂಬಿರುವ ಮೂರು ಲಕ್ಷಕ್ಕೂ ಹೆಚ್ಚು ಆ್ಯಪ್‌ಗಳು — ಇವುಗಳೆಲ್ಲ ಅಲ್ಗೊರಿದಂ ಮೇಲೆ ಕೆಲಸ ಮಾಡುತ್ತವೆ. ಸ್ಮಾರ್ಟ್‌ಫೋನ್, ಅಲೆಕ್ಸಾ, ಸಿರಿ, ಹೆಲ್ತ್ ಬ್ಯಾಂಡ್, ಫ್ರಿಡ್ಜ್, ವಾಚು, ಡ್ರೈವರ್‌ಲೆಸ್ ಕಾರು, ವಾಯ್ಸ್, ಫೇಸ್ ರಿಕಗ್ನಿಷನ್, ಎಟಿಎಂ ಮೆಶೀನು, ವಿಮಾನ, ರಾಕೆಟ್ಟು —ಅಲ್ಗೊರಿದಂ ಎಲ್ಲಿಲ್ಲ ಹೇಳಿ? ಈಗ ಪ್ರವರ್ಧಮಾನಕ್ಕೆ ಬರುತ್ತಿರುವ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್, ಮೆಶೀನ್ ಲರ್ನಿಂಗ್, ಡೀಪ್ ಲರ್ನಿಂಗ್, ಐಒಟಿ, ಸೈಬೋರ್ಗ್‌ಗಳೂ ಒಳಗಿರುವ ಅಲ್ಗೊರಿದಂನಂತೆಯೇ ನಡೆಯುವುದು. ಒಂದೇ ಮಾತಿನಲ್ಲಿ ಹೇಳುವುದಾದರೆ, 'ಅಲ್ಗೊರಿದಂ' ಸರ್ವಾಂತರ್ಯಾಮಿ. ಇನ್ನು ಮುಂದೆ ಇದು ಎಷ್ಟರಮಟ್ಟಿಗೆ ನಮ್ಮನ್ನೆಲ್ಲ ಆವರಿಸಲಿದೆ ಎಂದರೆ, ಬೆಳಗಿನ ಕಾಫಿಗೆಷ್ಟು ಸಕ್ಕರೆ ಬೇಕು? ತಿಂಡಿಯ ರೆಸಿಪಿ